SRUJANI
ISSN: 2583-3510
Indian Journal of Innovative Research and Development
(SIJIRD)
Volume-1 (01), March-April 2022, Pp. 46-51
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in

# ವಸಾಹತು ಕಾಲದ ಅವಿಭಜಿತ ಧಾರವಾಡ ಜಿಲ್ಲೆಯ ಸ್ಮಾರಕಗಳು ಮತ್ತು ಪರಂಪರೆ

ಡಾ. ಜಯಮ್ಮ ಬಿ*
*ಸಹ ಪ್ರಾಧ್ಯಾಪಕರು, ಸ್ನಾತ್ತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

***Abstract:***
ಧಾರವಾಡವು ಮರಾಠರಿಂದ 1817 ರಲ್ಲಿ ಬ್ರಿಟಿಷರ ವಶವಾಯಿತು ಜೊತೆಗೆ 1830ರ ವೇಳೆಗಾಗಲೆ ಜಿಲ್ಲಾ ಕೇಂದ್ರವೂ ಆಯಿತು. ಈ ಕಾಲಕ್ಕೆ ಧಾರವಾಡದ ಪರಿಸರ ಸಮೃದ್ಧವಾಗಿತ್ತು. ಬ್ರಿಟಿಷರ ದೂರದ ಪ್ರದೇಶಗಳಿಗೆ ಈ ನಗರ ಸಂಪರ್ಕ ಕಲ್ಪಿಸುತ್ತಿತ್ತು ಮತ್ತು ಇಲ್ಲಿಯ ಜನ ನಾಡು ನುಡಿ ಸಾಹಿತ್ಯ ಪ್ರೇಮಿಗಳಾಗಿದ್ದು ತಮ್ಮದೇ ಆದ ಸಂಸ್ಕೃತಿಯೊಂದಿಗೆ ಜೀವಿಸುತ್ತಿದ್ದರು ಹತ್ತಿ ಬೆಳೆಯುವ ಈ ನಾಡಿನಲ್ಲಿ ನೂಲುವುದು ನೆಯ್ಗೆ ಮಾಡುವುದು ಸಾಮಾನ್ಯವಾಗಿತ್ತು ಇದಕ್ಕೆ ಪೂರಕ ಎನ್ನುವಂತೆ ಇಲ್ಲಿಗೆ ಅಧಿಕಾರಿಗಳಾಗಿ ಬಂದ ಬ್ರಿಟಿಷರು ಈ ಪ್ರದೇಶದ ಅಭಿವೃದ್ಧಿಗೆ ಶ್ರಮಿಸಿದರು. ಬ್ರಿಟಿಷರು ತಮ್ಮ ಆಡಳಿತಾವದಿಯಲ್ಲಿ ನಿರ್ಮಾಣವಾದ ಅನೇಕ ಆಡಳಿತ, ಶೈಕ್ಷಣಿಕ ಸಂಸ್ಥೆಗಳು, ಕಟ್ಟಡಗಳು ನಿರ್ಮಾಣವಾದವು. ಪ್ರಸ್ತುತ ಲೇಖನದಲ್ಲಿ ವಸಾಹತುಗಳ ಕಾಲದ ಪರಂಪರೆ ಮತ್ತು ಸ್ಮಾರಕಗಳನ್ನು ವಿಶ್ಲೇಷಿಸಲಾಗಿದೆ.

***Key Words:*** ಬ್ರಿಟಿಷ್, ವಸಾಹತುಶಾಹಿ, ಸ್ಮಾರಕ, ಪರಂಪರೆ, ಧಾರವಾಡ.

### ಪೀಠಿಕೆ

ಬಿಟಿಷರ ಆಗಮನದ ನಂತರ ಸಾರಿಗೆ ಶಿಕ್ಷಣ ಧರ್ಮ ಸಮಾಜ ಸಂಸ್ಕೃತಿ ಇತ್ಯಾದಿಗಳ ಕಡೆ ಗಮನ ಹರಿಸಿದರು ಇವುಗಳ ಬೆಳವಣಿಗೆಗೆ ಅನೇಕ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಉದ್ದೇಶಗಳಿಗಾಗಿ ಅನೇಕ ಕಟ್ಟಡಗಳನ್ನು ಇಂಡೋ-ಸಾರ್ಸನಿಕ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಕಟ್ಟಡ ನಿರ್ಮಾಣಕ್ಕಾಗಿ ಅವರು ಬಳಸುತ್ತಿದ್ದ ವಸ್ತುಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಹೆಚ್ಚಿನ ಬಾಳಿಕೆ ಬರುವಂತಿದ್ದವು. ಅವರು ನಿರ್ಮಿಸಿದ ಪ್ರಮುಖ ಕಟ್ಟಡಗಳಲ್ಲಿ ಜಿಲ್ಲಾಧಿಕಾರಿ ಕಛೇರಿ, ಧಾರವಾಡದ ಅಂಚೆ ಕಛೇರಿ, ರೈಲ್ವೆ ಸ್ಟೇಷನ್ ಮತ್ತು ಸಿವಿಲ್ ಆಸ್ಪತ್ರೆ ಮುಂತಾದವು ಪ್ರಮುಖವಾದವುಗಳಾಗಿವೆ.

### ಜಿಲ್ಲಾಧಿಕಾರಿಗಳ ಕಛೇರಿ

ಧಾರವಾಡದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ 1820ರಲ್ಲಿ ಸ್ಥಾಪಿತವಾಯಿತು. ಭಾರತದ ಪ್ರಥಮ ಕೋ ಆಪರೇಟಿವ್ ರಿಜಿಸ್ಟ್ರಾರ್ ಆಗಿ ಸರ್ ಜೇಮ್ಸ್ ಮೆಕನಿಲ್ ಅವರು ನೇಮಕವಾದರು ಅವರು ಸಹಕಾರಿ ಆಂದೋಲನದ ಬಗ್ಗೆ ಜಾಗೃತಿ ಉಂಟುಮಾಡಲು ಅಖಂಡ ಭಾರತದ ಪ್ರವಾಸ ಕೈಗೊಂಡರು ಆದರೆ ಉಪಯೋಗವಾಗಲಿಲ್ಲ. ಅಷ್ಟರಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಇಲ್ಲಿ ಆರಂಭವಾಯಿತು.

### ಅಂಚೆ ಕಛೇರಿ

1830ರ ವೇಳೆಗೆ ಮುಂಬೈ ಗೆಜೆಟ್‌ನಲ್ಲಿ ಧಾರವಾಡದ ಅಂಚೆ ಕಛೇರಿಯ ಉಲ್ಲೇಖ ಬರುತ್ತದೆ. ಹಾಗಾಗಿ ಈ ವೇಳೆಗಾಗಲೇ ಅಲ್ಲಿ ಅಂಚೆ ಕಛೇರಿ ಆರಂಭವಾಗಿತ್ತು. 18ನೇ ಶತಮಾನದ ಅಂತ್ಯದ ವೇಳೆಗೆ ಧಾರವಾಡ ಮುಂಬೈ ಮದ್ರಾಸ್ ಅಂಚೆ ಇಲಾಖೆ ಜೋಡಿಸುವ ಕೊಂಡಿಯಾಗಿತ್ತು. ಮದ್ರಾಸ್, ಬೆಂಗಳೂರು, ಧಾರವಾಡ ಮಾರ್ಗವಾಗಿ ಮುಂಬೈಗೆ ಅಂಚೆ ಚೀಲಗಳು ವಿನಿಮಯವಾಗುತ್ತಿದ್ದವು. ಮುಂದೆ ಮಲಬಾರಿನಿಂದ ಮಂಗಳೂರು, ಹೊನ್ನಾವರ ಧಾರವಾಡ ಮಾರ್ಗವಾಗಿ ಮುಂಬೈಗೆ ಟಪಾಲು ಚೀಲಗಳು ಹೋಗುತ್ತಿದ್ದವು. ಆರಂಭದಲ್ಲಿ ಎತ್ತಿನ ಗಾಡಿಗಳು ನಂತರ ಚಕ್ಕಡಿಗಳು ಆ ನಂತರ ರೈಲುಗಾಡಿಗಳಲ್ಲಿ ಟಪಲುಗಳು ಸಾಗಿಸಲ್ಪಡುತ್ತಿದ್ದವು.

*Please cite this article as:* ಜಯಮ್ಮ ಬಿ. (2022). ವಸಾಹತು ಕಾಲದ ಅವಿಭಜಿತ ಧಾರವಾಡ ಜಿಲ್ಲೆಯ ಸ್ಮಾರಕಗಳು ಮತ್ತು ಪರಂಪರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(1), 46–51.

**ರೈಲ್ವೆ ಸ್ಟೇಷನ್**

ಸದರ್ನ್ ಮರಾಠ ರೈಲ್ವೆ ಕಂಪನಿ 1882 ರಲ್ಲಿ ಜಿಲ್ಲೆಯಲ್ಲಿ ಮೀಟರ್‌ಗೇಜ್ ರೈಲ್ವೆ ಹಾಕಲು ಶುರುಮಾಡಿತು. 1887ರವರೆಗೂ ಇದು ಮುಂದುವರೆಯಿತು. ಹಾಗಾಗಿ 1888ರಲ್ಲಿ ಇಲ್ಲಿ ರೈಲ್ವೆಯ ಕೇಂದ್ರ ಕಛೇರಿಯನ್ನು ನಿರ್ಮಿಸಿದರು. ಇದೊಂದು ಮಹತ್ವದ ಊರಾಗಿದ್ದರಿಂದ ಇಲ್ಲಿಯ ಸ್ಟೇಷನ್‌ನ್ನು ಸುವ್ಯವಸ್ಥಿತವಾಗಿ ನಿರ್ಮಿಸಿದರು. ರೈಲ್ವೆ ನೌಕರರಿಗಾಗಿ ಕ್ವಾರ್ಟರ್ಸಗಳು ನಿರ್ಮಾಣವಾದವು. ಮುಂದೆ ಅಧಿಕಾರಿಗಳ ಬಂಗ್ಲೆಗಳು ಸಹ ನಿರ್ಮಾಣವಾದವು. ಈಗಿನ ನಿಲ್ದಾಣಕ್ಕೂ ಹಿಂದಿನ ನಿಲ್ದಾಣಕ್ಕೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಮುಂದಿನ ಭಾಗ ಮಾತ್ರ ಸ್ವಲ್ಪ ನವೀಕರಿಸಲಾಗಿದೆ. ಆದರೆ ಇಂದು ಒಳಭಾಗದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಹುಬ್ಬಳ್ಳಿಯಿಂದ ಧಾರವಾಡಕ್ಕೆ ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವ ಗಾಡಿ ಲೋಕಲ್ ಟ್ರೇನ್ ಆಗಿತ್ತು. ಹುಬ್ಬಳ್ಳಿಯಿಂದ ಪುನಾಕ್ಕೆ ಹೋಗುವ ಗಾಡಿ ಮೇಲ್‌ಗಾಡಿ ಆಗಿತ್ತು. ಕಾರಣ ಅದರಲ್ಲಿ ಪ್ರಯಾಣಿಕರ ಜೊತೆ ಅಂಚೆ ಟಪಾಲು ಕೂಡ ಹೋಗುತ್ತಿದ್ದವು. 1908ರ ವೇಳೆಗೆ ಸದರ್ನ ಮರಾಠ ಕಂಪನಿ ಮದ್ರಾಸ್ ರೈಲ್ವೆ ಕಂಪನಿಯೊಂದಿಗೆ ವಿಲೀನವಾಯಿತು

**ಬೃಹತ್ ಆಕಾರದ ಶಂಖ**

1922 ರಲ್ಲಿ ರವೀಂದ್ರನಾಥರು ಪುಣೆ, ಬೆಂಗಳೂರು ಮೇಲಿನಲ್ಲಿ ಸಿಲೋನ್ ಗೆ ಹೊರಟಿದ್ದರು. ಈ ವಿಷಯ ಧಾರಾವಾಡದ ಕವಿಗಳಿಗೆ, ಸಾಹಿತಿಗಳಿಗೆ ಮೊದಲೇ ತಿಳಿದಿತ್ತು ಹಾಗಾಗಿ ಮೇಲ್ ಗಾಡಿ ಧಾರವಾಡದ ರೈಲ್ವೆ ಸ್ಟೇಷನ್‌ಗೆ ಬರುವ ವೇಳೆಗೆ ಅವರೆಲ್ಲ ಇಲ್ಲಿ ಬಂದಿದ್ದರು ಹಾಗ ರವೀಂದ್ರರು ಗಾಡಿಯಿಂದ ಕೆಳಗೆ ಇಳಿದು ಇಲ್ಲಿಯ ಕವಿಗಳಾದ ದ ರಾ ಬೇಂದ್ರೆ ಇತರರೊಂದಿಗೆ ಉಭಯ ಕುಶಲೋಪಾರಿ ವಿಚಾರಿಸಿ ಅವರುಗಳು ನೀಡಿದ ಫಲಪುಷ್ಪ ಗೌರವಗಳನ್ನು ಸ್ವೀಕರಿಸಿದ್ದರು. ಅಂದು ಮೇಲು ಗಾಡಿ ಇವರ ಮಾತು ಕಥೆಗಳಿಗಾಗಿಯೇ 5 ನಿಮಿಷಕ್ಕೂ ಹೆಚ್ಚು ಕಾಲ ನಿಂತಿತ್ತು. ಈ ನೆನಪಿಗಾಗಿ ರೈಲ್ವೆ ಸ್ಟೇಷನ್ನಿನಲ್ಲಿ ರವೀಂದ್ರರ ಒಂದು ಭಾವಚಿತ್ರ ಇರಿಸಲಾಗಿದೆ. ಆ ಸ್ಥಳಕ್ಕೆ ಗುರುದೇವ ಸ್ಮಾರಕ ಎಂದು ಕರೆಯಲಾಗಿದೆ. ಅಲ್ಲದೇ ಇಲ್ಲಿ ಒಂದು ಚಿಕ್ಕ ತೋಟ ನಿರ್ಮಿಸಿ ಬೃಹತ್ ಆಕಾರದ ಶಂಖ ಸ್ಥಾಪಿಸಲಾಗಿದೆ. ಶಂಖ ಬಂಗಾಳಿಗಳ ಪ್ರತೀಕ.

**ಕಣಗಿನಹಾಳದ ಸಹಕಾರ ಸಂಘ**

ಗದಗ್ ಜಿಲ್ಲೆಯ ಕಣಗಿನಹಾಳದಲ್ಲಿ ರಾಷ್ಟ್ರದಲ್ಲಿಯೇ ಪ್ರಪ್ರಥಮ ಸಹಕಾರಿ ಸಂಘ ಅಸ್ತಿತ್ವಕ್ಕೆ ಬಂದಿತು ಭಾರತದ ಪ್ರಥಮ ಕೋ ಆಪರೇಟಿವ್ ರಜಿಸ್ಟ್ರಾರ್ ಆಗಿ ಬಂದ ಸರ್ ಜೇಮ್ಸ ಮೆಕನಿಲರ ಪ್ರಯತ್ನದ ಫಲ ಹಾಗು ಕಣಗಿನಹಾಳ ಗ್ರಾಮದ ಸಿದ್ದನಗೌಡ ಸಣ್ಣರಾಯನಗೌಡರು ಬಹುದೊಡ್ಡ ಜಮಿನ್ದಾರರಾಗಿದ್ದು ಅವರು ಸಹಕಾರ ಸಂಘಕ್ಕೆ ತಮ್ಮ ಜಮೀನನ್ನೆ ದಾನ ನೀಡಿದರು ಇದರ ಪರಿಣಾಮ 1905 ಮೇ 8 ರಂದು ರಾಷ್ಟ್ರದಲ್ಲಿಯೇ ಪ್ರಥಮವಾದ ಸಹಕಾರ ಸಂಘ ಅಸ್ತಿತ್ವಕ್ಕೆ ಬಂದಿತು. ಎರಡನೆಯ ಗ್ರಾಮೀಣ ಸಹಕಾರಿ ಪತ್ತಿನ ಸಂಘ ಇದೇ ಜಿಲ್ಲೆಯ ಗದಗ ತಾಲೂಕಿನ ಹುಲಿಕೋಟಿಯಲ್ಲಿ ಸ್ಥಾಪನೆಯಾಯಿತು

**ಸಿವಿಲ್ ಆಸ್ಪತ್ರೆ**

ಧಾರವಾಡದ ಸಿವಿಲ್ ಆಸ್ಪತ್ರೆ 1850 ರ ಅವಧಿಯಲ್ಲಿಯೇ ಪ್ರಾರಂಭಿಸಲ್ಪಟ್ಟಿದೆ. ಇದು ಜಿಲ್ಲೆಯ ಅತ್ಯಂತ ಪ್ರಾಚೀನ ಆಸ್ಪತ್ರೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಪ್ರಸ್ತುತ ಇದು ಕಿಲ್ಲಾ ಪ್ರದೇಶದಲ್ಲಿದೆ 1929 ರಲ್ಲಿ ಪ್ರಸೂತಿ ವಿಭಾಗ 1939 ರಲ್ಲಿ ಹೊರ ರೋಗಿಗಳ ವಿಭಾಗ ಪ್ರಾರಂಭಗೊಂಡಿದೆ ಈಗ ಒಳರೋಗಿಗಳ ವಿಭಾಗ ಪ್ರಯೋಗಾಲಯ ರಕ್ತಭಂಡಾರ ಆಡಳಿತ ಕಛೇರಿ ಇತ್ಯಾದಿಗಳೆಲ್ಲವೂ ಇದರಲ್ಲಿ ಸೇರಿಕೊಂಡಿವೆ.

**ಪ್ರಥಮ ಕನ್ನಡ ಶಾಲೆ**

ಬ್ರಿಟಿಷರು ಶಿಕ್ಷಣ ಪ್ರಸಾರಕ್ಕಾಗಿ 'ಬಾಂಬೆ ನೇಟಿವ್ ಎಜುಕೇಶನ್ ಸೋಸೈಟಿ' ಎಂಬ ಅರೆ ಸರಕಾರಿ ಸಂಸ್ಥೆಯನ್ನು 1815ರಲ್ಲಿ ಸ್ಥಾಪಿಸಿದರು. ಇದು 1826 ರಲ್ಲಿ ಧಾರವಾಡದಲ್ಲಿ ಮರಾಠ ಶಾಲೆ ಪ್ರಾರಂಭಿಸಲು ಆದೇಶಿಸಿತು. ಆದರೆ ಧಾರವಾಡದ ಅಸಿಸ್ಟೆಂಟ್ ಕಲೆಕ್ಟರ್ ಸರ್ ಇಲಿಯಟ್ ವಾಲ್ಟರ್ ಅವರು ಇಲ್ಲಿಯ ಭಾಷೆ ಕನ್ನಡ ಹಾಗಾಗಿ ಇಲ್ಲಿ ಕನ್ನಡ ಶಾಲೆ ಆರಂಭಿಸಲು ಪ್ರಯತ್ನಿಸಿದರು. ಆದರೆ ಅದು ವಿಫಲವಾಯಿತು. ಹಾಗಾಗಿ ಸ್ವತಃ ಇಲಿಯಟ್ ಅವರು ಇಲ್ಲಿಯ ಹಾಲಗೆರೆ ದಂಡೆ ಮೇಲೆ ಒಬ್ಬ ಬ್ರಾಹ್ಮಣರ ಮನೆ (ಇಂದಿನ ಗಾಂಧಿನಗರದ ಗುರುದತ್ತ ಭವನ) ಬಾಡಿಗೆ ಹಿಡಿದು 1831 ರಲ್ಲಿ ಕನ್ನಡ ಶಾಲೆ ಆರಂಭಿಸಿದರು. ಅಲ್ಲದೆ ಸ್ವಂತ ಖರ್ಚಿನಿಂದ 1833 ರವರೆಗೂ ಇದನ್ನು ಮುನ್ನಡಿಸಿದರು ಇದೇ ಇಲ್ಲಿಯ ಪ್ರಥಮ ಕನ್ನಡ ಶಾಲೆ. ನಂತರ ಸುಮಾರು ವರ್ಷಗಳವರೆಗೆ ಇದರ ಬಗ್ಗೆ ತಿಳಿಯುವುದಿಲ್ಲ. 1863 ರಲ್ಲಿ ಬಾಸೆಲ್ ಮಿಷನ್ ಸಂಸ್ಥೆ ಧಾರವಾಡದಲ್ಲಿ ಪ್ರಥಮ ಹೈಸ್ಕೂಲ್ ಆರಂಭಿಸಿತು. ಇದು ಇಲಿಯಟ್ ಆರಂಭಿಸಿದ ಶಾಲಾ ಕಟ್ಟಡದಲ್ಲೇ ಇತ್ತು.

**ಗಂಡು ಮಕ್ಕಳ ಟ್ರೈನಿಂಗ್ ಕಾಲೇಜ್**

ಧಾರವಾಡ ಜಿಲ್ಲೆಯಲ್ಲಿ 1826 ರಿಂದ ಬ್ರಿಟಿಷರು ಶಿಕ್ಷಣ ನೀಡಲು ಆರಂಭಿಸಿದರು. 1855 ರ ವೇಳೆಗೆ ಧಾರವಾಡ ಶಾಲೆಗಳ ಸಂಖ್ಯೆ ಹನ್ನೆರೆಡು. ಇಡೀ ಜಿಲ್ಲೆಯಾದ್ಯಾಂತ ಶಾಲೆಗಳು ಬೆಳೆಯುತ್ತಲೇ ಇದ್ದವು. ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಪೆಕ್ಟರ್ ಕಛೇರಿ ಆರಂಭವಾಯಿತು. ಇಲ್ಲಿಯ ಇನ್ಸ್‌ಪೆಕ್ಟರ್ ಆದ ಜಿ.ಎಫ್.ಲಿಸ್ಟರ್ ಅವರು ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರಿರಬೇಕೆಂಬ ಕಾರಣದಿಂದ ತರಬೇತಿ ಸಂಸ್ಥೆ ಆರಂಭಿಸಿದರು. 1856ರಲ್ಲಿ ನಾರ್ಮಲ್ ಸ್ಕೂಲ್ ಸಂಸ್ಥೆ ಆರಂಭವಾಯಿತು. ನಂತರ ಇದು ಬೆಳಗಾವಿಗೆ ತೆರಳಿ ಅಲ್ಲಿಂದ ಮತ್ತೆ 1875 ರಲ್ಲಿ ಈ ನಾರ್ಮಲ್ ಸ್ಕೂಲ್ ಮತ್ತೆ ಧಾರವಾಡಕ್ಕೆ ಬಂದು ಕಾರ್ಯಾರಂಭ ಮಾಡಿತು. ಇದು ಮುಂದೆ 1992 ರಲ್ಲಿ ಜಿಲ್ಲಾ ಶಿಕ್ಷಣ ಕೇಂದ್ರ ಮತ್ತು ತರಬೇತಿ ಸಂಸ್ಥೆ ಆಯಿತು.

**ಬಾಸೆಲ್ ಮಿಷನ್ ಪ್ರೌಢಶಾಲೆ**

ಶೈಕ್ಷಣಿಕ ಕೇಂದ್ರದಲ್ಲಿ ಬಾಸೆಲ್ ಮಿಷನರಿಗಳ ಕೊಡುಗೆ ತುಂಬಾ ಮಹತ್ವದ್ದಾಗಿತ್ತು. ಈ ಸಂಸ್ಥೆಯವರು ಧಾರಾವಾಡದಲ್ಲಿ ಪ್ರಥಮ ಪ್ರೌಢಶಾಲೆಯನ್ನು ಆರಂಭಿಸಿದರು. ರೆ. ಸ್ಯಾಮುಯಲ್ ಹೆಬಿಕ್ ಹಾಗೂ ಡಾ. ಹರ್ಮನ್ ಫ್ರೆಡರಿಕ್ ಮೊಗ್ಲಿಂಗ್ ಅವರು ಮಿಷನರಿಯ ಕೆಲಸ ಮಾಡಿದ್ದಲ್ಲದೆ ಹಾಲಗೆರೆಯ ಕೆರೆಯ ದಂಡೆಯ ಮೇಲೆ ಒಂದು ಕಟ್ಟಡದಲ್ಲಿ ಕಿರಿಯ ಇಂಗ್ಲೀಷ್ ಪಾಠಶಾಲೆ, ಕಿರಿಯ ಕನ್ನಡ ಪ್ರಾಥಮಿಕ ಪಾಠಶಾಲೆ ಆರಂಭಿಸಿದರು ಆರಂಭದಲ್ಲಿ ಕ್ರಿಶ್ಚಿಯನ್ ಶಾಲೆಗೆ ಮಕ್ಕಳನ್ನು ಕಳುಹಿಸಲು ಸಂಪ್ರದಾಯವಾದಿಗಳು ಹಿಂದುಮುಂದು ನೋಡಿದರು. ಹಾಗಾಗಿ ಮೊಗ್ಲಿಂಗ್ ಅವರೇ ಸ್ವತಃ ಮನೆ ಮನೆಗೆ ಹೋಗಿ ಪಾಲಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಸೇರಿಸಿಕೊಂಡರು. 1863 ರಲ್ಲಿ ಈ ಶಾಲೆಗೆ ಪ್ರೌಢಶಾಲೆಯ ಮನ್ನಣೆ ದೊರೆಯಿತು. ಬರುಬರುತ್ತಾ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಶಾಲೆಗೆ ಬರಲಾರಂಭಿಸಿದರು. ಮುಂದೊಂದು ದಿನ ಈ ಶಾಲೆಗೆ ಧಾರಾವಾಡದಲ್ಲಿಯ ಎಲ್ಲಾ ಶಾಲೆಗಳ ಮೇಲ್ವಿಚಾರಣೆಯ ಅಧಿಕಾರವೂ ದೊರೆಯಿತು.

**ವಿದ್ಯಾರಣ್ಯ ಶಾಲೆ**

1882 ರಲ್ಲಿ ವಿಕ್ಟೋರಿಯ ಹೈಸ್ಕೂಲ್ ಎಂದು ಆರಂಭವಾಗಿ ಸ್ವಾತಂತ್ರ್ಯದ ನಂತರ ವಿದ್ಯಾರಣ್ಯ ಹೈಸ್ಕೂಲ್ ಎಂದು ಮರು ನಾಮಕರಣಗೊಂಡಿದೆ

**ಸರ್ಕಾರಿ ಹೆಣ್ಣು ಮಕ್ಕಳ ಟ್ರೈನಿಂಗ್ ಕಾಲೇಜ್**

1894ರ ವೇಳೆಗೆ ಮುಂಬೈ ಪ್ರಾಂತ್ಯದ ದಕ್ಷಿಣ ವಿಭಾಗದಲ್ಲಿ ಬೆಳಗಾವಿ, ಬಿಜಾಪುರ, ಧಾರಾವಾಡ, ಕಾರಾವಾರ, ರತ್ನಗಿರಿ, ಕಲ್ಬುರ್ಗಿ ಜಿಲ್ಲೆ) 150 ಕ್ಕೂ ಹೆಚ್ಚು ಹೆಣ್ಣು ಮಕ್ಕಳ ಶಾಲೆಗಳಿದ್ದವು. ಶಿಕ್ಷಣದ ಗುಣಮಟ್ಟ ಸುಧಾರಿಸಲು ಹೆಣ್ಣುಮಕ್ಕಳ ಶಾಲೆಗೆ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಲು 1895 ರಲ್ಲಿ ಟ್ರೈನಿಂಗ್ ಕ್ಲಾಸ್ ಆರಂಭಿಸಲಾಯಿತು. 1903 ರಲ್ಲಿ ಈ ಟ್ರೈನಿಂಗ್ ಕ್ಲಾಸ್‌ಗೆ 'ಫೀಮೇಲ್ ನಾರ್ಮನಲ್ ಸ್ಕೂಲ್' ಎಂದು ಕರೆಯಲಾಯಿತು. 1908 ರಲ್ಲಿ ಸರ್ಕಾರ ಈ ಶಾಲೆಗೆ ಭೂಮಿ ನೀಡಿತು. 1909ರ ವೇಳೆಗೆ ದಕ್ಷಿಣ ವಿಭಾಗಕ್ಕೆ ಪ್ರಥಮ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜು ಇದಾಯಿತು.

**ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ**

ಐತಿಹಾಸಿಕ ಪರಂಪರೆಯನ್ನು ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ಸಲುವಾಗಿ ಈ ಸಂಸ್ಥೆ ಹುಟ್ಟಿದೆ. ಅಲ್ಲದೆ ಶ್ರೀಸಾಮಾನ್ಯರಿಗೆ ಐತಿಹಾಸಿಕ ಪ್ರಜ್ಞೆ ಉಂಟುಮಾಡುವ ಉದ್ದೇಶವನ್ನು ಸಹ ಇದು ಹೊಂದಿದೆ. 1914ರಲ್ಲಿ ಹುಟ್ಟಿಕೊಂಡ ಈ ಸಂಸ್ಥೆ ಜನಸಾಮಾನ್ಯರಿಗೆ ಐತಿಹಾಸಿಕ ಪ್ರಜ್ಞೆ ಉಂಟುಮಾಡುವುದಲ್ಲದೆ ಯುವ ಜನರಿಗೆ ಅಧ್ಯಯನ ಸಂಶೋಧನೆಗೆ ಆದ್ಯತೆ ನೀಡಿದೆ ಇಲ್ಲಿ ಅಧ್ಯಯನಕಾರರಿಗೆ ಗ್ರಂಥ ಭಂಡಾರವಿದೆ. ಜೊತೆಗೆ ಮ್ಯೂಜಿಯಂ, ಆರ್ಟಗ್ಯಾಲರಿಗಳು ಕೂಡ ಇಲ್ಲಿವೆ.

**ಕರ್ನಾಟಕ ಕಾಲೇಜು**

ಧಾರವಾಡದಲ್ಲಿ 1926 ರಲ್ಲಿ ಮರಾಠಿ ಶಾಲೆ, 1831ರಲ್ಲಿ ಕನ್ನಡ ಶಾಲೆ, 1856ರಲ್ಲಿ ನಾರ್ಮಲ್ ಸ್ಕೂಲ್ ಪ್ರಾರಂಭವಾಗಿ 1864 ರಲ್ಲಿ ಟ್ರೈನಿಂಗ್ ಕಾಲೇಜ್ ಆರಂಭವಾಯಿತು. 1863 ರಲ್ಲಿ ಬಾಸೆಲ್ ಮಿಷನ್ ಹೈಸ್ಕೂಲ್, 1901ರಲ್ಲಿ ಕರ್ನಾಟಕ ಎಜುಕೇಷನ್ ಸೊಸೈಟಿಗಳು ಆರಂಭವಾದವು. ಆದರೆ ಕಾಲೇಜು ಯಾವುದೇ ಇಲ್ಲದಿದ್ದಕ್ಕಾಗಿ ಕಾಲೇಜಿನ ಅವಶ್ಯಕತೆ ಈ ಜನರಿಗೆ ಕಾಡತೊಡಗಿತು. ಇಲ್ಲಿ ಅಧ್ಯಯನ ಮಾಡಿದ ಹುಡುಗರು ಕಾಲೇಜು ಶಿಕ್ಷಣಕ್ಕಾಗಿ ಮುಂಬೈ ಅಥವಾ ಪುನಾಕ್ಕೆ ಹೋಗಬೇಕಿತ್ತು. ಅದು ಶ್ರೀಮಂತರಿಗೆ ಮಾತ್ರ ಸಾಧ್ಯವಾಗಿತ್ತು. ಹಾಗಾಗಿ 1876 ರ ವೇಳೆಗ ಕಾಲೇಜಿನ ಬಗ್ಗೆ ಯೋಚನೆ ಬಂದಿತಾದರೂ ಕ್ಷಾಮ ಅತಿವೃಷ್ಟಿಗಳ ಕಾರಣದಿಂದ ಸಾಧ್ಯವಾಗಲಿಲ್ಲ. 1904 ರಲ್ಲಿ ಲಾರ್ಡ್ ಲ್ಯಾಮಿಂಗ್ಟನ್‌ರಿಗೆ ಕಾಲೇಜು ಸ್ಥಾಪನೆಯ ವಿಷಯದಲ್ಲಿ ಒತ್ತಾಯ ಬರುತ್ತದೆ. ಅದೇ ವೇಳೆಗೆ "ಕರ್ನಾಟಕ ಕಾಲೇಜ್ ಅಸೋಸಿಯೇಷನ್" ಎಂಬ ಸಂಸ್ಥೆ ಹುಟ್ಟಿಕೊಳ್ಳುತ್ತದೆ ಇದರ ಅವಿರತ ಪರಿಶ್ರಮದಿಂದ ಜೊತೆಗೆ ಸರ್ಕಾರಕ್ಕೆ ಇಲ್ಲಿಯ ಬುದ್ಧಿಜೀವಿಗಳು ಕಾಲೇಜು ನಿರ್ಮಿಸಲು ಎರಡು ಲಕ್ಷ ರೂಪಾಯಿಗಳನ್ನು ನೀಡಿದ್ದರಿಂದ ಕಾಲೇಜು ಆರಂಭವಾಯಿತು. ಮೊದಲ ಮಹಾಯುದ್ಧ ನಡೆಯುತ್ತಿದ್ದರಿಂದ ಕಾಲೇಜಿನ ಕಟ್ಟಡ ನಿರ್ಮಿಸುವುದು ಅಸಾಧ್ಯವಾಗಿ ಟ್ರೇನಿಂಗ್ ಕಾಲೇಜಿನ ಒಂದು ಭಾಗದಲ್ಲಿ ಆರಂಭವಾಯಿತು. ಸರ್.ಎಂ.ಬಿ.ಚೌಬಾಳ ಅವರ ಅಮೃತಹಸ್ತದಿಂದ ಕಾಲೇಜು 1917 ಜೂನ್ 20 ಕ್ಕೆ ಉದ್ಘಾಟನೆಯಾಯಿತು. ಹೆಚ್.ಜಿ.ರಾವಲ್ಸಿನ್ ಪ್ರಥಮ ಪ್ರಿನ್ಸಿಪಾಲರಾದರು. ಇವರು ಕಾಲೇಜಿಗೆ ಸ್ಥಳ ಹುಡುಕುತ್ತಿರುವಾಗ ಈಗಿನ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಳವನ್ನು ಆಯ್ಕೆ ಮಾಡಿದ್ದರು. ಈ ಪ್ರಕಾರ ಗವರ್ನರ್ ಸರ್ ಜಾರ್ಜ ಲಾಯ್ಡ್ ಬಂದು ಶಿಲೆ ನೆಟ್ಟರು. ಕಾರ್ಯಕ್ರಮ ಮುಗಿಸಿ ಮರುಳುವಾಗ ಮದ್ರಾಸ್ ಅಂಡ್ ಸದರ್ನ್ ಮರಾಠ ರೈಲ್ವೆ ಕೇಂದ್ರ ಕಛೇರಿ ಕಟ್ಟಡ ಕಾಣಿಸಿತು. ಆ ಕಟ್ಟಡವನ್ನು ಕರ್ನಾಟಕ ಕಾಲೇಜಿಗೆ ಆಯ್ಕೆ ಮಾಡಿದರು. (ಲಾಯ್ಡ್ ಅವರು ರೈಲ್ವೆ ಇಲಾಖೆಯೊಂದಿಗೆ ಪತ್ರ ವ್ಯವಹಾರ ಮಡೆಸಿ 3,26,956 ರೂಗಳಿಗೆ ಖರೀದಿಸಿದರು) ಹಾಗಾಗಿ ಟ್ರೇನಿಂಗ್ ಕಾಲೇಜ್‌ನಿಂದ ತನ್ನ ಸ್ವಂತ ಕಟ್ಟಡಕ್ಕೆ 1920 ಜುಲೈ 15 ರಂದು ವರ್ಗಾಯಿಸಲಾಯಿತು. ಹೀಗೆ 1917 ರಲ್ಲಿ ಆರಂಭವಾದ ಆರ್ಟ್ಸ್ ಮುಂದೆ 1924 ರಲ್ಲಿ ಸೈನ್ಸ್, ಕಾಮರ್ಸ್ ಎಲ್ಲಾ ವಿಷಯಗಳು ಆರಂಭವಾದವು. ಇಂದು ಕರ್ನಾಟಕ ಕಾಲೇಜ್ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸರ್ವತೋಮುಖ ಅಭಿವೃದ್ಧಿ ಹೊಂದಿದೆ ಇಲ್ಲಿಯ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಕೊಂಡಿದ್ದಾರೆ.

**ಕನ್ನಡ ಸಂಶೋಧನ ಸಂಸ್ಥೆ**

ಕನ್ನಡ ನಾಡಿನ ಇತಿಹಾಸ ಸಂಸ್ಕೃತಿ ಪರಂಪರೆಯ ಪುನರ್ರಚನೆ ಕುರಿತು ಸಂಶೋಧನೆ ಹಾಗು ಅಧ್ಯಯನ ಮಾಡಲು 1939 ರಲ್ಲಿ ಈ ಸಂಸ್ಥೆ ಹುಟ್ಟಿತು. ರಾಜ್ಯಗಳ ಪುನರ್‌ವಿಂಗಡನೆ

ಸಂದರ್ಭದಲ್ಲಿ ಈ ಸಂಸ್ಥೆ 1957 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಆಯಿತು. ಈ ಸಂಸ್ಥೆಯ ವತಿಯಿಂದ ಇತಿಹಾಸ ಮತ್ತು ಸಂಸ್ಕೃತಿ ರಚನೆ ಯ ಮೂಲ ಆಕರಗಳಾದ ಶಾಸನ ನಾಣ್ಯ ಹಸ್ತಪ್ರತಿ ತಾಳೆಗರಿ ಅಪರೂಪದ ಲೋಹ ಶಿಲ್ಪಗಳು ಮೂರ್ತಿಶಿಲ್ಪಗಳು ಛಾಯಾಚಿತ್ರ ವರ್ಣಚಿತ್ರ ಮಡಿಕೆ–ಕುಡಿಕೆ ಆಯುಧಗಳು ಮುಂತಾದ ಪ್ರಾಚ್ಯವಸ್ತುಗಳ ಬಗ್ಗೆ ಅಧ್ಯಯನ ಮಾಡುವುದಲ್ಲದೆ ಅವುಗಳ ರಕ್ಷಣೆಗಾಗಿ ವಸ್ತು ಸಂಗ್ರಹಾಲಯವನ್ನು ಸಹ ಒಳಗೊಂಡಿದೆ ಅಲ್ಲದೆ ಈ ಸಂಸ್ಥೆಯ ವತಿಯಿಂದ ಉತ್ಖನನ ಕಾರ್ಯವನ್ನೂ ಕೈಗೊಳ್ಳಲಾಗುತ್ತದೆ . ಜೊತೆಗೆ ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳೂ ಇಲ್ಲಿ ನಡೆಯುತ್ತವೆ.

**ಹೆಬಿಕ್ ಮೆಮೋರಿಯಲ್ ಚರ್ಚ್**

ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಹಲವಾರು ಧಾರ್ಮಿಕ ಸಂಸ್ಥೆಗಳನ್ನು ಕೂಡ ಅವರು ನಿರ್ಮಿಸಿದ್ದಾರೆ. ಅವುಗಳಲ್ಲಿ ಹೆಬಿಕ್ ಮೆಮೋರಿಯಲ್ ಚರ್ಚ್ ಕೂಡ ಒಂದು. 1835 ಕ್ಕೂ ಪೂರ್ವದಲ್ಲಿ ಧಾರಾವಾಡದಲ್ಲಿ ಹಿಂದೂ, ಮುಸ್ಲಿಂ, ಜೈನರೆಲ್ಲರೆಲ್ಲಾ ವಾಸವಾಗಿದ್ದು ಅವರಿಗೆಲ್ಲಾ ತಮ್ಮ ತಮ್ಮ ಧರ್ಮಗಳಿಗೆ ಅನುಗುಣವಾಗಿ ದೇವಾಲಯ, ಮಠಗಳು, ಜೈನಬಸಿದಿಗಳು ಇದ್ದವು. ಆದರೆ ಕ್ರೈಸ್ತರಿಗಾಗಿ ಯಾವುದೇ ಪ್ರಾರ್ಥನ ಮಂದಿರಗಳಿರಲಿಲ್ಲ. ಹಾಗಾಗಿ ಬೆಳಗಾವಿಯ ಲಂಡನ್ ಮಿಷನರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ರೇಬಿಯನ್ ಎಂಬುವವನು ಧಾರಾವಾಡಕ್ಕೆ ಬಂದು ಇಲ್ಲಿಯ ಕ್ರೈಸ್ತರಿಗೂ ಹಾಗೂ ಇತರರಿಗೂ ಕ್ರೈಸ್ತ ಬೋಧನೆ ಮಾಡಿಹೋಗುತ್ತಿದ್ದ.

ಸ್ವಿಡ್ಜರ್‌ಲ್ಯಾಂಡಿನ ಬಾಸೆಲ್ ಮಿಷನ್ ಸಂಸ್ಥೆ 1838 ರ ವೇಳೆಗೆ ಭಾರತದತ್ತ ತನ್ನ ದೃಷ್ಠಿ ಹಾಯಿಸಿತು. ಭಾರತಕ್ಕೆ ಧರ್ಮ ಪ್ರಚಾರಕ್ಕೂ ಕಳುಹಿಸಲು ತಿರ್ಮಾನಿಸಲಾಯಿತು. 1837 ಜನವರಿ 25 ರ ವೇಳೆಗೆ ಧಾರಾವಾಡ ಬಾಸೆಲ್ ಮಿಷನ್‌ನ ಅಧಿಕೃತ ಸ್ಥಳವಾಯಿತು. ಇವರು ಇಲ್ಲಿ ಕ್ರಿ.ಶ. 1844 ರಲ್ಲಿ ಕ್ರೈಸ್ತ ದೇವಾಲಯ ನಿರ್ಮಿಸಲು ಆರಂಭಿಸಿದರು. 1845 ರ ವೇಳೆಗೆ ಅದು ಮುಕ್ತಾಯವಾಯಿತು. ಈ ಚರ್ಚ ಇಂಡೋ–ಯೂರೋಪಿಯನ್ ಶೈಲಿಯಲ್ಲಿದ್ದು 26 ಅಡಿ ಉದ್ದ 42 ಅಡಿ ಅಗಲವಾಗಿದೆ. 1933 ರ ವೇಳೆಗೆ ಹೆಬಿಕ್ ಅವರ ಸೇವೆ ಪರಿಗಣಿಸಿ ಈ ದೇವಾಲಯವನ್ನು ಹೆಬಿಕ್ ಮೆಮೋರಿಯಲ್ ಚರ್ಚ್ ಎಂದು ಮರು ನಾಮಕರಣ ಮಾಡಲಾಯಿತು ಇದಲ್ಲದೆ ಸೇಂಟ್ ಜೋಸೆಪ್ ಕ್ಯಾಥೊಲಿಕ್ ಚರ್ಚ್ (1888), ಸೇಂಟ್ ಆಯಂಡ್ರೂಸ್ ಚರ್ಚ (1890), ಆಸ್ಸೆನ್ಷನ್ ಚರ್ಚ (1905), ಹೋಲಿನೇಮ್ ಚರ್ಚ (1928) ಮತ್ತು ಸೇಂಟ್ ಜಾನ್ ಲೂಥರನ್ ಚರ್ಚ (1944) ಕೂಡ ಪ್ರಮುಖವಾದವುಗಳಾಗಿವೆ.

**ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ**

19ನೇ ಶತಮಾನದಲ್ಲಿ ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿಗಳು ಆರಂಭಗೊಂಡು ಸಂಸ್ಕೃತ ಸತ್ವ ಭಾಷೆ ಎಂದೇ ಪರಿಗಣಿಸಿ ವಿಶ್ವವಿದ್ಯಾಲಯಗಳಲ್ಲೂ ಸಂಸ್ಕೃತಕ್ಕೆ ಆದ್ಯತೆ ದೊರೆಯಿತು. ಭಾರತದಾದ್ಯಂತ ಸಂಸ್ಕೃತ ಪಾಠಶಾಲೆಗಳು ಆರಂಭವಾದವು. ಅದೇ ರೀತಿ ಧಾರವಾಡದಲ್ಲಿ ಶಂಕರಾಚಾರ್ಯರ ಸಂಸ್ಕೃತ ಪಾಠಶಾಲೆ ಆರಂಭವಾಯಿತು. 1987 ಏಪ್ರಿಲ್‌ನಲ್ಲಿ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀಸ್ವಾಮಿಗಳು ಧಾರಾವಾಡಕ್ಕೆ ಆಗಮಿಸಿದರು. ಇದೇ ಸಮಯದಲ್ಲಿ ಗುರುನಾಥರಾವ್ ಪಾಠಕ್ ಅವರು ಸ್ವಾಮಿಗಳಿಂದ ಪಾಠಶಾಲೆ ಆರಂಭಿಸಲು ಆಶೀರ್ವಾದ ಪಡೆದರು. 1894 ರ ವೇಳೆಗೆ ಪಾಠಶಾಲೆಗೆ ಮೂರ್ತಸ್ವರೂಪ ಬಂದಿತು. ಲೋಖಂಡೆ ಶ್ರೀಪಾದರಾಯರು ಸ್ಥಳ ದಾನ ಮಾಡಿದರು. ಶಾಲೆಗಾಗಿ ಐದು ಅಂತಸ್ತಿನ ಕಟ್ಟಡ ಆರಂಭವಾಯಿತು. ಮೊದಲನೇ ಅಂತಸ್ತಿನಲ್ಲಿ ಮೂರು ಕೋಣೆಗಳು ನ್ಯಾಯ ವ್ಯಾಕರಣ, ಪ್ರೌಢಶಾಸ್ತ್ರ ಅಧ್ಯಯನ, ಎರಡನೇ ಅಂತಸ್ತಿನಲ್ಲಿ ನಾಟಕ ಅಲಂಕಾರ, ಅಲಂಕಾರಾದಿ ಸಾಹಿತ್ಯ ಪ್ರವಚನ, ಪುರಾಣ ಉತ್ಸವ ಇತ್ಯಾದಿಗಳಿಗೆ, ಮೂರನೇ ಅಂತಸ್ತು ವೇದ ಅಧ್ಯಯನ, ನಾಲ್ಕನೇ ಅಂತಸ್ತು ವೇದಾಂತ ಅಧ್ಯಯನಕ್ಕೆ. ಇಲ್ಲಿಯ ಒಂದು ಸ್ಥಳ ಶ್ರೀ ಶಂಕರಾಚಾರ್ಯರ ಮೂರ್ತಿ ಸ್ಥಾಪನೆಗೆ ಮೀಸಲಾಗಿದೆ. ಅಲ್ಲದೆ ಅಲ್ಲಿಯೇ ಶ್ರೀ ಕೃಷ್ಣಾನಂದ ಸ್ವಾಮಿಗಳ ಸಮಾಧಿಯೂ ಇದೆ. ಅದರ ಮೇಲೆ ಚಿಕ್ಕ ದೇವಾಲಯವಿದ್ದು ಅಲ್ಲಿ ಶ್ರೀ ಕೃಷ್ಣೇಶ್ವರ, ಶ್ರೀಮನ್ನಾರಾಯಣ ಶ್ರೀ ದಕ್ಷಿಣಾಮೂರ್ತಿಯ ಶಿಲ್ಪಗಳಿವೆ.

**ತತ್ವಾನ್ವೇಷಣ ಮಂದಿರ**

ಬ್ರಿಟಿಷ್ ಆಳ್ವಿಕೆಯ ಪರಿಣಾಮ ಧಾರಾವಾಡ ಅಭಿವೃದ್ಧಿಯತ್ತ ಸಾಗಿತು. ಅಲ್ಲದೆ ಇಲ್ಲಿಯ ಜನ ಆಧ್ಯಾತ್ಮ ಜೀವನ, ಸಾಹಿತ್ಯದ ಅಭಿರುಚಿ, ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದುವರೆದವರಾಗಿದ್ದರು. ಇವರಿಗೆ ಆಧ್ಯಾತ್ಮಿಕ ಸಂಸ್ಥೆಯೊಂದು ಇಲ್ಲಿ ಬೇಕಾಗಿತ್ತು. ಹಾಗಾಗಿ 1902 ಜುಲೈನಲ್ಲಿ ಧಾರವಾಡದ ತತ್ವಾನ್ವೇಷಣಾ ಮಂದಿರ ಆರಂಭವಾಯಿತು. ಇದು ಥಿಯೋಸೋಫಿಕಲ್ ಸೊಸೈಟಿಯ ಉಪಶಾಖೆಯಾಗಿದೆ. ಎನ್.ವಿ.ಮುದಲಿಯಾರ್, ಎ.ಬಿ.ಜೋಷಿ, ಕೆ ಕೃಷ್ಣರಾವ್, ಶ್ರೀನಿವಾಸರಾವ್ ಮುಂತಾದವರೆಲ್ಲ ಸೇರಿಕೊಂಡು ಈ ಸಂಸ್ಥೆಯನ್ನು ಆರಂಭಿಸಿದರು. 1940 ರ ವೇಳೆಗೆ ಗ್ರಹಣ ಹಿಡಿದಿತ್ತು. 1957 ರಲ್ಲಿ ಮತ್ತೆ ಪುನರುಜ್ಜೀವನವಾಯಿತು. ಇಂದಿಗೂ ಸಕ್ರೀಯವಾಗಿ ಶೈಕ್ಷಣಿಕ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವವು.

**ಲಿಂಗಾಯತ ಟೌನ್‌ಹಾಲ್**

ಧಾರಾವಾಡದಲ್ಲಿ ಲಿಂಗಾಯತ ವಿದ್ಯಾಸಂಸ್ಥೆ 1883 ಆರಂಭವಾದ ತಕ್ಷಣ ಲಿಂಗಾಯತ ಸಮಾಜದಲ್ಲಿ ಅಭಿವೃದ್ಧಿಯ ಕಾರ್ಯಗಳು ಭರದಿಂದ ಸಾಗಿದವು. ಇವರು ಪದೇ ಪದೇ ಸಭೆ ಸೇರಿ ಚರ್ಚಿಸಲು ಒಂದು ಕಟ್ಟಡದ ಅವಶ್ಯಕತೆ ಇತ್ತು. ಹಾಗಾಗಿ 1909 ರಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಚಾಲನೆ ದೊರೆಯಿತು. ಹಲವಾರು ಸಮಸ್ಯೆಗಳನ್ನು ಎದುರಿಸಿ ಕೊನೆಗೆ 1913 ರಂದು ಪ್ರಾರಂಭವಾಯಿತು. ಈ ಹಾಲ್‌ನಲ್ಲಿ ಲಿಂಗಾಯತ ಸಮಾಜದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕ

ವಿಷಯಗಳ ಚರ್ಚೆಗಳು ನಡೆಯಲಾರಂಭಿಸಿದವು. ಹಾಗೂ ಆ ಸಮಾಜದ ಅಭಿವೃದ್ಧಿಯಲ್ಲಿ ಈ ಹಾಲ್‌ನ ಪಾತ್ರ ಮಹತ್ವದ್ದಾಗಿದೆ.

**ಹಡ್‌ಸನ್ ಲೈಬ್ರರಿ**

ಲಿಂಗಾಯತ ಟೌನ್ ಹಾಲ್ ಗೆ ಒಳಭಾಗದಲ್ಲಿ ಎಡಗಡೆ ಇರುವ ಒಂದು ಚಿಕ್ಕ ಕಟ್ಟಡ ಇದನ್ನು 1927–28 ರಲ್ಲಿ ಲಿಂಗಾಯತ ಎಜುಕೇಷನ್ ಅಸೋಶಿಯೇಶನ್ ಅವರು ವಾಚಾನಾಲಯದ ಅವಶ್ಯಕತೆ ಮನಗಂಡು ನಿರ್ಮಿಸಿಕೊಂಡರು. ಇದು ಸಾರ್ವಜನಿಕರಿಗೆ ಮುಕ್ತವಾಗಿತ್ತು. ಇದಕ್ಕೆ ಮೆ.ಹಡ್‌ಸನ್ ಅವರ ಹೆಸರಿಡಲಾಯಿತು. ಅವರು 14 ಎನ್‌ಸೈಕ್ಲೋಪೀಡಿಯಾ ಕೊಟ್ಟಿದ್ದರು. ಆ ಕಾಲಕ್ಕೆ ಮುನ್ನೂರು ಪುಸ್ತಕಗಳು ಇಲ್ಲಿದ್ದವು.

**ಮರಾಠ ಮಂಡಳ**

ಧಾರಾವಾಡ ಬ್ರಿಟೀಷ್ ನಿಯಂತ್ರಣಕ್ಕೆ ಬರುವ ಪೂರ್ವದಲ್ಲಿಯೇ ಧಾರಾವಾಡ ಮರಾಠ, ಪೇಶ್ವೆ, ಫಲವರ್ಧನರ ಆಳ್ವಿಕೆಗೆ ಒಳಪಟ್ಟಿತ್ತು. ಆ ಕಾಲದಿಂದಲೂ ಅಧಿಕಾರಿಗಳು, ವ್ಯಾಪಾರಸ್ಥರು ಸೈನಿಕರು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದರು. ಅಲ್ಲದೆ ಟ್ರೇನಿಂಗ್ ಕಾಲೇಜ್, ಕಲೆಕ್ಟರ್ ಕಂಛೇರಿ, ನ್ಯಾಯಲಯ, ಆಸ್ಪತ್ರೆ, ಕರ್ನಾಟಕ ಕಾಲೇಜಿನಲ್ಲಿ ಮರಾಠ ಸಿಬ್ಬಂದಿಗಳು ಇದ್ದರು. ಅವರೆಲ್ಲರಿಗೂ ಸಾಹಿತ್ಯಕ, ಶೈಕ್ಷಣಿಕ, ಸಾಂಸ್ಕೃತಿಕ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ತಮ್ಮದೇ ಭಾಷೆಯ ಸಂಸ್ಥೆ ಅವರಿಗೆ ಬೇಕಾಗಿತ್ತು. ಇದರ ಪರಿಣಾಮವೇ ಕರ್ನಾಟಕ–ಮಹಾರಾಷ್ಟ್ರ ಮಂಡಳಿ. ಇಲ್ಲಿ ಒಂದು ಚಿಕ್ಕ ವಾಚಾನಾಲಯವೂ ಇದ್ದಿತು. ಇಲ್ಲಿ ಶಿವಾಜಿ ಜಯಂತಿ, ತಿಲಕ್ ಪುಣ್ಯತಿಥಿ, ಗಣೇಷ ಉತ್ಸವ, ಸಂಕ್ರಾಂತಿ, ದಸರ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಅಲ್ಲದೆ ಹೊರಗಿನಿಂದ ವಿದ್ವಾಂಸರುನ್ನು, ಖ್ಯಾತ ಸಾಹಿತಿಗಳನ್ನು ಸಂಗೀತಕಾರರನ್ನೂ ಕರೆಯಿಸಿ ಕಾರ್ಯಕ್ರಮ ನೀಡುತ್ತಿದ್ದರು. ಮರಾಠಿ ನಾಟಕಗಳನ್ನು ಏರ್ಪಡಿಸುತ್ತಿದ್ದರು. ಇದು ಪ್ರತ್ಯೇಕ ಸಂಸ್ಥೆಯಾಗಿದ್ದರೂ ಕನ್ನಡ ಭಾಷೆಯೊಂದಿಗೆ ಸಂಬಂಧ ಅತ್ಯುತ್ತಮವಾಗಿತ್ತು. 1939 ರಲ್ಲಿ ಈ ಸಂಸ್ಥೆಗೆ ಮರಾಠಿ ಮಂಡಳಿ ಎಂದು ಪುನರ್ ನಾಮಕರಣವಾಯಿತು. 1940 ರಲ್ಲಿ ನೊಂದಾಯಿಸಲ್ಪಟ್ಟಿತು. ಮುಂದೆ ನ್ಯಾಯಲಯದ ಆವರಣದಲ್ಲಿ ಜಾಗ ಪಡೆದು ಸ್ವಂತ ಕಟ್ಟಡ ನಿರ್ಮಿಸಿದರು. ಅಲ್ಲಿ ವಾಚನಾಲಯ ಮುಕ್ತವಾಗಿತ್ತು. ದೈನಿಕಗಳು, 12 ಸಾಪ್ತಾಯಿಕ, 22 ಮಾಸಿಕಗಳು ಒಟ್ಟಾರೆ 40 ನಿಯತಕಾಲಿಕೆಗಳು ಇಲ್ಲಿ ಲಭ್ಯ ಇದ್ದವು. 8000 ಕ್ಕೂ ಅಧಿಕ ಕೃತಿಗಳಿದ್ದವು. ಸ್ವಾತಂತ್ರ್ಯದ ನಂತ್ರ ಗಡಿಸಮಸ್ಯೆ ಬಂದಾಗ 1970 ರಲ್ಲಿ ಮಂಡಳಕ್ಕೆ ಬೆಂಕಿ ಹಚ್ಚಲಾಯಿತು. ದುರದೃಷ್ಟ ಅಲ್ಲಿದ್ದ ಗ್ರಂಥಾಲಯವೂ ಸುಟ್ಟು ಕರಕಲಾಯಿತು. ನಂತರ ನೂತನ ಕಟ್ಟಡವನ್ನು ಡಿ.ದೇವರಾಜ ಅರಸು ಅವರ ಕಾಲದಲ್ಲಿ(1973) ಅಡಿಗಲ್ಲು ಸಮಾರಂಭವಾಯಿತು. 1979 ರಲ್ಲಿ ಕಟ್ಟಡದ ಉದ್ಘಾಟನೆಯಾಯಿತು. ಆದರೆ ಅದು ಇಂದು ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಂಡಿದೆ.

**ಕರ್ನಾಟಕ ವಿದ್ಯಾವರ್ಧಕ ಸಂಘ**

ಕನ್ನಡ ನಾಡು ನುಡಿ ಸಾಹಿತ್ಯ ಭಾಷೆಗಳ ಅಧ್ಯಯನ ಹಾಗು ಸಂರಕ್ಷಣೆಗಾಗಿ ಉದಯಿಸಿದ ಸಂಸ್ಥೆ ಇದಾಗಿದೆ. ಇದರ ಮೂಲ ಕತೃ ಆಲೂರು ವೆಂಕಟರಾಯರು, ದೇಶಪಾಂಡೆ, ಪಾಟಿಲ ಪುಟ್ಟಪ್ಪ ಮುಂತಾದ ಗಣ್ಯರು ಇಂದಿಗೂ ಕನ್ನಡ ಭಾಷೆ ಸಾಹಿತ್ಯ ನಾಡು ನುಡಿ ಸಂಸ್ಕೃತಿಯ ಬಗ್ಗೆ ನಿರಂತರ ಚಟುವಟಿಕೆಗಳು ನಡೆಯುತ್ತವೆ.

**ಇತರ ಸ್ಮಾರಕಗಳು**

**ಜಕ್ಕಣಿ ಬಾವಿಯ ಹತ್ತಿರ ಇರುವ ಸ್ಮಾರಕ**

ಮಹಾಯುದ್ಧದಲ್ಲಿ ಭಾರತಕ್ಕೆ ಸ್ವಾತಂತ್ರ ಸಿಗದೆ ಇದ್ದದ್ದು ಹಾಗೂ ಖಿಲಾಫತ್ ಚಳುವಳಿ ಹಾಗೂ ಅಸಹಕಾರ ಚಳುವಳಿಗಳ ಪರಿಣಾಮ ಧಾರಾವಾಡ 1921 ಜೂನ್ 30 ರಂದು ಹರತಾಳ ಆಚರಿಸಲು ಕರೆ ನೀಡಲಾಯಿತು. ಹಾಗಾಗಿ ಪೋಲೀಸ್ ಠಾಣೆಯ ಬಳಿ ವಿಶೇಷ ಜನಸಂದಣಿ ನೆರೆಯಿತು. ಸ್ವಯಂ ಸೇವಕರು ಸರಾಯಿ ಅಂಗಡಿ ಸುಡಲು ಯತ್ನಿಸಿದರು ಎಂಬ ಸುಳ್ಳು ನೆಪ ಒಡ್ಡಿ ಜಿಲ್ಲಾಧಿಕಾರಿ ಹೆಚ್.ಎಲ್. ಪೇಂಡರ್ ಆದೇಶದ ಮೇರೆಗೆ ಗೋಲಿಬಾರ್ ನಡೆಯಿತು. ಈ ಸಮಯದಲ್ಲಿ ಮೂವರು ಸ್ವಯಂ ಸೇವಕರು ಮರಣ ಹೊಂದಿದರು. ಅಲ್ಲದೆ 39 ಜನ ಗಾಯ ಹೊಂದಿದ್ದರು. ದೇಶಕ್ಕಾಗಿ ಪ್ರಾಣ ಕಳೆದುಕೊಂಡ ಹುತಾತ್ಮರ ನೆನಪಿಗೆ ಧಾರವಾಡದ ಜಕ್ಕಣಿ ಬಾವಿ ಹತ್ತಿರ ಸ್ಮಾರಕ ಹಾಕಿಸಲಾಗಿದೆ.

**ಥ್ಯಾಕರೆಯ ಸ್ಮಾರಕ**

ಕಿತ್ತೂರು ಚನ್ನಮ್ಮ ಪಾರ್ಕನಲ್ಲಿ ಕಲೆಕ್ಟರ್ ಸಾಹೇಬ ಥ್ಯಾಕರೆಯ ಸ್ಮಾರಕ ಸ್ಥಂಭವನ್ನು ನಿಲ್ಲಿಸಲಾಗಿದೆ. ಕಿತ್ತೂರು ಚನ್ನಮ್ಮನ ವಿರುದ್ಧ ಹೋರಾಡಿ ಮಡಿದ ಥ್ಯಾಕರೆಯ ಸ್ಮರಣಾರ್ಥ ಇದನ್ನು ನಿಲ್ಲಿಸಲಾಗಿದೆ. ಈ ಸ್ಥಂಭವನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದೆ ಸ್ಮಾರಕದ ಸುತ್ತಲೂ ಸುಂದರವಾದ ಉದ್ಯಾನವನ ನಿರ್ಮಿಸಿ ಅದಕ್ಕೆ ಕಿತ್ತೂರು ಚನ್ನಮ್ಮ ಪಾರ್ಕ್ ಎಂದು ನಾಮಕರಣ ಮಾಡಲಾಗಿದೆ.

**ಥ್ಯಾಕರೆ ಸಮಾಧಿ**

ಧಾರವಾಡದ ಮಟನ್ ಮಾರ್ಕೆಟ ಬಳಿ ಬ್ರಿಟಿಷ ಅಧಿಕಾರಿ ಕಲೆಕ್ಟರ ಥ್ಯಾಕರೆ ಸಮಾಧಿ ಇದೆ. ಈ ಸಮಾಧಿ ಸ್ಥಳ ಈಗ ತುಂಬಾ ದುಸ್ಥಿತಿಯಲ್ಲಿದೆ. ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ಚನ್ನಮ್ಮಳ ವಿರುದ್ಧ ಹೋರಾಡಿ ಈತ ಪ್ರಾಣ ಕಳೆದು ಕೊಂಡನು.ಆತನ ಕಳೆಬರಹವನ್ನು ಇಲ್ಲಿ ಸಂಸ್ಕಾರ ಮಾಡಲಾಗಿದೆ. ಇದೇ ಸ್ಥಳದಲ್ಲಿ ಈತನೊಂದಿಗೆ ಇದ್ದ ಇತರೆ ಅಧಿಕಾರಿಗಳಾದ ಬ್ಲಾಕ್, ಸ್ಯಾಮುಯ್ಯಲ್, ಡೈಟನ್ ಮುಂತಾದ ಏಳು ಅಧಿಕಾರಿಗಳ ಸಮಾಧಿಗಳಿವೆ.

ಈ ರೀತಿಯಾಗಿ ಬ್ರಿಟಿಷರು ಆಡಳಿತ, ಶೈಕ್ಷಣಿಕ ಸಾಂಸ್ಕೃತಿಕ ಹಾಗು ಧಾರ್ಮಿಕ ಕಾರಣಗಳಿಗಾಗಿ ಅನೇಕ ಕಟ್ಟಡಗಳನ್ನು ನಿರ್ಮಿಸಿದರು ಈ ಕಟ್ಟಡಗಳಿಗೆ ಇಂಡೋ–ಸಾರ್ಸೆನಿಕ್ ವಾಸ್ತು ಶೈಲಿಯನ್ನ ಅಳವಡಿಸಿರುವರು. ಈ ವಾಸ್ತು ಶೈಲಿಯನ್ನು ಬ್ರಿಟಿಷರು 19ನೇ ಶತಮಾನದಲ್ಲಿ ಭಾರತದಲ್ಲಿ

ಪರಿಚಯಿಸಿದರು. ಕೆಳಭಾಗದಲ್ಲಿ ಆಯತಾಕಾರದ ಕಟ್ಟಡ ನಿರ್ಮಿಸಿ ಮೇಲೆ ಸಮತಟ್ಟಾದ ಛಾವಣಿ? ಕಮಾನುಗಳಿಗೆ ಬದಲಾಗಿ ಚೂಪು ಕಮಾನುಗಳನ್ನು ಅಳವಡಿಸಲಾಗಿರುತ್ತದೆ. ಕಟ್ಟಡಗಳಲ್ಲಿ ಕಂಡುಬರುವ ಇಗರ್ಜಿಗಳು ಕೆಲವೊಮ್ಮೆ ಉದ್ದವಾಗಿರುತ್ತವೆ. ಇಲ್ಲಿಯ ಹಜಾರಗಳು ಉದ್ದವಾಗಿರುತ್ತವೆ. ಮೇಲೆ ಬಾಗಿದ ದಪ್ಪ ಚಾವಣಿ ಇರುತ್ತದೆ. ಚಾವಣಿಯ ಭಾರವನ್ನು ಕಬ್ಬಿಣ/ ಮರದ ಅಡ್ಡಪಟ್ಟಿಕೆಗಳು ಹೊತ್ತಿರುತ್ತವೆ. ಇಲ್ಲಿಯ ಚಾವಣಿಗಳಿಗೆ ಮಂಗಳೂರು ಹೆಂಚು ಬಳಸಲಾಗಿದೆ. ಧಾರವಾಡ ಪರಿಸರದಲ್ಲಿ ಅರಣ್ಯ ಯಥೇಚ್ಛವಾಗಿದ್ದರಿಂದ ಕಟ್ಟಡಗಳ ನಿರ್ಮಾಣದಲ್ಲಿ ಹೆಚ್ಚಾಗಿ ಮರದ ಸಾಮಗ್ರಿಗಳನ್ನು ಬಳಸಲಾಗಿದೆ. ಮತ್ತು ಇಲ್ಲಿ ನೆಲಕ್ಕೆ ಹಾಸು ಹೆಂಚುಗಳಿಂದ ಅಲಂಕರಿಸಲಾಗುತ್ತದೆ. ಇಲ್ಲಿಯ ಕಿಟಕಿಗಳು ಅಗಲವಾಗಿ ಸುಂದರವಾಗಿ ಅಲಂಕೃತವಾಗಿರುತ್ತವೆ. ಇನ್ನು ಇವರು ವಿಜಯೋತ್ಸವದಲ್ಲಿ ಸ್ಥಂಭಗಳನ್ನು ನಿಲ್ಲಿಸುವುದು ಸಾಮಾನ್ಯ. ಹಾಗೆ ಇಲ್ಲಿಯೂ ಸ್ಥಂಭಗಳ ನಿಲ್ಲಿಸಿರುವರು.

**ಉಪಸಂಹಾರ**

ಒಟ್ಟಾರೆ 19ನೇ ಶತಮಾನದಲ್ಲಿ ಧಾರವಾಡ ಪ್ರದೇಶದಲ್ಲಿ ಬ್ರಿಟೀಷ ಆಳ್ವಿಕೆ ಆರಂಭವಾಗಿದ್ದಷ್ಟೇ ಅಲ್ಲ ಪ್ರತ್ಯಕ್ಷ, ಪರೋಕ್ಷವಾಗಿ ಆಡಳಿತಾತ್ಮಕ ಶೈಕ್ಷಣಿಕ ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಮತ್ತು ಕಲೆ ಮತ್ತು ವಾಸ್ತು-ಶಿಲ್ಪ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯೊಂದಿ ತನ್ನ ಪರಂಪರೆಯನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುತ್ತಿದೆ. ಈ ನಿಟ್ಟಿನಲ್ಲಿ ಈ ಭಾಗದ ಪರಂಪರೆಯನ್ನು ಸಂರಕ್ಷಿಸುವ ಹೊಣೆ ನಮ್ಮೆಲ್ಲರ ಕರ್ತವ್ಯವೂ ಹೌದು.

**ಪರಾಮರ್ಶನ/ಆಕರ ಗ್ರಂಥಗಳು**


- ಕಟಗೇರಿ ನ. ಹ, (2007). *ಗತಕಾಲದ ಧಾರವಾಡ.* ಕರ್ನಾಟಕ ಸಂಶೋಧನ ಮಂಡಳ.
- ಜಯಮ್ಮ, ಬಿ. (2010). *ಧಾರವಾಡ ಜಿಲ್ಲೆಯ ಪುರಾತತ್ವ.* ಶ್ರಿ ಅನ್ನದಾನೇಶ್ವರಿ ಪ್ರಕಾಶನ.
- ಷಡಕ್ಷರಯ್ಯ ಮತ್ತು ಜಯಮ್ಮ, ಬಿ. (2007). *ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು.* ಧಾರವಾಡ ಜಿಲ್ಲಾ ಆಡಳಿತ.
- *ಧಾರವಾಡ ಜಿಲ್ಲಾ ಗೆಜೆಟಿಯರ್.* (1995). ರಾಜ್ಯ ಗೆಜೆಟಿಯರ್ ಇಲಾಖೆ.